ಮುಂದೆ ನಿಂತು ಠಳಾಯಿಸುವಷ್ಟು ಬದಲಾದ. ಬೇಕೆಂದೇ ಕ್ಯಾಡ್‌ಬರೀಸ್ ಕೊಂಡ. ಐಸ್‌ಕ್ರೀಮ್ ತಿಂದು ಗಂಟಲು ಕೆಡಿಸಿಕೊಂಡು ಪೇಚಿಗೆ ಬಿದ್ದ. ತಾನು ಪಿಯು ಫೇಲಾಗಿ ಕಾಲೇಜು ಬಿಟ್ಟರೂ ಡಿಗ್ರಿಗೆ ಸೇರಿದ್ದ ತನ್ನ ಸಹಪಾಠಿ ಗೆಳೆಯರ ಫ್ರೆಂಡ್‌ಶಿಪ್ ರಿನೀವಲ್ ಮಾಡಿಕೊಂಡು ಇವಳು ಕ್ಯಾಂಟೀನ್‌ಗೆ ಹುಡುಗಿಯರೊಂದಿಗೆ ಹೋದಾಗ ತಾನೂ ಗೆಳೆಯರೊಂದಿಗೆ ಕಾಣಿಸಿಕೊಂಡು ದಿನವೂ 'ಬಿಲ್' ಎತ್ತಿ ಶ್ರೀರಾಮನಾದ. ಗೆಳೆಯರಿಗೆ ಸ್ಮೈಲ್ ಹೊಡೆಯಿತು. 'ಸಂಗೀತ ಮೇಷ್ಟ್ರು ಅಪಸ್ವರ ಹಾಡಿದರೆ ಶಿಷ್ಯರು ಗಾರ್ದಭ ರಾಗ ಹಾಡಿಯಾರ್ಲೆ' ಕಿಂಡಲ್ ಮಾಡಿದರು. 'ಇವಳಿಗಿಂತ ಬ್ಯೂಟಿಫುಲ್ ಹುಡ್ಗೀರು ಮ್ಯೂಸಿಕ್‌ಗೆ ಬರುವಾಗ ಈ ದುಬ್ಲಿ ಹಿಂದೇಕೆ ಬಿದ್ದೆಯೋ?' ಎಂದು ಗೇಲಿಮಾಡಿದರು. ಇವನಿಗೂ ಹಾಗೆ ಅನ್ನಿಸಿದರೂ ಬದಲಾಗಲಿಲ್ಲ. ಆ ಹುಡುಗಿಗೂ ತಿಳಿಯದಂತೆ ಪ್ರೀತಿಸಿದರೂ ಇಡೀ ಧರ್ಮಶಾಲೆಗೇ ದಿನಗಳೆದಂತೆ ಟಾಮ್ ಟಾಮ್ ಆಗಿದ್ದು, ಇವನಿಗೆ ತಿಳಿಯಲೇ ಇಲ್ಲ. 'ನೀನು ಹಿಂಗೆ ಶಾಲೆಗೆ ಅಜ್ಜನ ಬಿಟ್ಟು ಕಾಲೇಜ್ ರೋಡ್‌ನ ಸರ್ವೇ ಮಾಡಿದರೆ ಶಾಲೆ ಬದನಾಮ್ ಆಗ್ತದ್ದೇ...' ಎಂದೊಬ್ಬ ಪಿಳ್ಳಾಚಾರಿ ತಿಳಿ ಹೇಳಿದ. 'ನೀನೇನೇ ಸಂಗೀತ ನುಡಿಸಿದ್ರೂ ಸೆಲೂನ್ ಅನ್ನೋದೇ ಎಂಡಿಂಗ್‌ನಲ್ಲಿ ನಿಮ್ಮ ಪ್ರೇಮನು ಕಟಿಂಗ್ ಮಾಡಿಬಿಡ್ತದೆ' ಅಂತ ಮಾರ್ಮಿಕವಾಗಿ ಚುಚ್ಚಿ ಅವನ ಮನವನ್ನು ಪಂಕ್ಚರ್ ಮಾಡಿದ. ಒಂದು ದಿನ ಪೆಚ್ಚಾಗಿದ್ದರೂ ಮರುದಿನವೇ ಪಂಕ್ಚರ್ ಹಾಕಿಸಿಕೊಂಡು 'ಹವಾ' ತುಂಬಿಕೊಂಡ ಟ್ಯೂಬ್‌ನಂತಾದ... ಪ್ರೇಮವೇ ಹಾಗೇನೋ, ಎದುರಾಳಿಗಳಿದ್ದಷ್ಟೂ ಸ್ಟ್ರಾಂಗ್. ಕದನ ಕುತೂಹಲ ರಾಗಕ್ಕೆ ಸಜ್ಜಾದ.

ಮಾಸಗಳು ನೀರಸವಾಗಿ ಕಳೆವಾಗ ಬರೀ ಕಣ್ ನೋಟ, ಹರಟೆ ಏನೇನೂ ಸಾಲದೆನಿಸಿದರೂ 'ಐ ಲವ್ ಯು' ಎಂದು ಹೇಳಲು ಧೈರ್ಯ ಸಾಲದೆ ಹಪಹಪಿಸಿದ. ಈ ಸಲ ಬರುವ ತ್ಯಾಗರಾಜ ಆರಾಧನೆಯನ್ನು ಭರ್ಜರಿ ಮಾಡಬೇಕೆಂದುಕೊಂಡು ಒಪ್ಪದ ಅಜ್ಜನನ್ನು ಮಾತುಗಳಿಂದ ಮುದಗೊಳಿಸಿ ಒಪ್ಪಿಸಿದ. ಆರ್.ಕೆ.ಎಂ. ಸೌಂಡ್ ಸಿಸ್ಟಂನವರ ಮೈಕು, ಲೈಟು ಏರಿಸಿ, ಚೇರ್‌ಗಳ ತರಿಸಿ, ಟೌನ್‌ಹಾಲ್‌ನಲ್ಲಿ ಭರ್ಜರಿ ಉತ್ಸವಕ್ಕೆ ಚಾಲನೆಕೊಟ್ಟ. ತನ್ನ ಮೊಮ್ಮಗನ ಜೊತೆ ಈ ದಪ್ಪನೆಯ ಬೊಂಬೆಯ ಬಿಳಿ ಸೀರೆಯಲ್ಲಿನ ಸಡಗರದ ಓಡಾಟವನ್ನು ಕಂಡ ಅಜ್ಜನಿಗೆ ಎಂಥದೋ ಗುಮಾನಿ. ದೇವರಪಟಗಳಿಗೆ ಪೂಜೆ ಮಾಡಿದವಳೂ ಅವಳೆ, ಬಂದವರನ್ನು ಕರೆದು ಕೂರಿಸಿದವಳು, ಪ್ರಸಾದ ಕೊಟ್ಟವಳೂ ಅವಳೆ. ಇವನೋ ಅವಳ ಮುಂದೆ ತಾರಮಯ್ಯ. ಆದರೂ ಎಲ್ಲಾ ಹುಡುಗಿಯರಿಗಿಂತ ಭೇಷಾಗಿ ವೀಣೆ ನುಡಿಸಿ ಚಪ್ಪಾಳೆ ಗಿಟ್ಟಿಸಿದವಳೂ ಅವಳೇ ಆದಾಗ, 'ಯಾರೋ ಈ ಸಖತ್ ಹುಡುಗಿ' ಎಂದು ಅಜ್ಜ ಎನ್‌ಕ್ವೈಯಿರಿ ಮಾಡದೆ ಬಿಡಲಿಲ್ಲ. 'ವೀಣೆ ಹೇಗೆ ನುಡಿಸ್ತಾಳೆ? ವಂಡರ್‌ಫುಲ್ ಅಲ್ವಾ? ನಮ್ಮ ಶಾಲೆಗೆ ಹೆಸರು ತರ್ತಾಳೆ' ಎಂದು ಹುಡುಗ ಬೀಗುವಾಗ 'ಕಾಲಾಯ್‌ತಸ್ಮೈ ನಮಃ' ಅಂತ ಅಜ್ಜ ಮೌನಕ್ಕೆ ಜಾರಿತು. ಮರುದಿನ ಮತ್ತೆ ಅದೇ ಉಬ್ಬಿದೆದೆ ಚಾಚಿಕೊಂಡು ಅದೇ ಜರಿಲಂಗ ರೇಶಿಮೆ ರವಿಕೆಯಲ್ಲಿ ಪ್ರತ್ಯಕ್ಷಳಾದಳು. ವೀಣೆ ಹುಡುಗ ವೀಣೆ ಬದಿಗಿಟ್ಟು, 'ನೀವು ಸ್ಯಾರಿಲೇ ಚೆಂದ' ಅಂತ ತೊದಲಿದ. 'ಯಾಕೆ? ಇದರಲ್ಲೇನಾಗಿದ್ದೇನೆ?' ಕತ್ತುಕೊಂಕಿಸಿದಳು. 'ಇದರಲ್ಲೂ ಗ್ರಾಂಡೇ... ಆದರೆ ಸ್ಯಾರಿಲೀ ಸಾಕ್ಷಾತ್ ಸರಸ್ವತಿ. ನೀವು ನುಡಿಸಿದ ಸಾಮಜವರಗಮನೆಯಂತೂ ಸೂಪರ್' ಜೊಲ್ಲು ಸುರಿಸಿದ. ಹೆಚ್ಚು ಮುಂದುವರೆಯುವ ಎದೆಗಾರಿಕೆಯಿರಲಿ, ಮಾತನಾಡಲೂ ತೋಚದೆ ವೀಣೆಪಾಠ ಆರಂಭಿಸಿದ. ಮುಗಿಸಿದ. ಮಳೆ ಬಂದು ಹಲವು ನವ್ಯ ಚಿತ್ರಗಳನ್ನು ಮೂಡಿಸಿದ್ದ ಹಳೆ ಗೋಡೆಯ ಮೇಲೆ ಕಮಟು ಹಿಡಿದು ದೂಳುಬಿದ್ದ ಮಂತ್ರಾಲಯ ಗುರುವರರು ವೀಣೆ ಹಿಡಿದು ಕೂತ ಹಳೆ ಪಟವನ್ನೇ ಅವಳು ನೋಡುತ್ತಾ ಕೂತಿದ್ದನ್ನು ಗಮನಿಸಿದ. 'ಅವರು ಗುರುರಾಘವೇಂದ್ರರು' ಅಂದ. ಬ್ರಾಹ್ಮಣರ ಹುಡುಗಿಗೆ ಶೂದ್ರನೊಬ್ಬ ಅದನ್ನ ಹೇಳಬೇಕೆ. 'ಹೌದೆ!' ಎಂದವನ ಕಣ್ಣುಗಳಲ್ಲಿ ಕಣ್ಣು ನೆಟ್ಟಳು. ಹುಡುಗ ಅಂಜಿದ. 'ಒಂದು ಸ್ತೋತ್ರ ಹಾಡಬೇಕೆನಿಸದೇ ಹಾಡಲೆ?' ಕೇಳಿದಳು.